ಈ) ಭೂಮಾಲೀಕರು ಹಾಗೂ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ ಸಂಬಂಧ ಎಷ್ಟು ವ್ಯಾಜ್ಯಗಳು ನ್ಯಾಯಾಲಯಗಳಲ್ಲಿ ಇದೆ ಹಾಗೂ ಎಷ್ಟು ವರ್ಷಗಳಿಂದ ನಡೆಯುತ್ತಿವೆ?

ಉ) ವ್ಯಾಜ್ಯಗಳನ್ನು ಇತ್ಯರ್ಥಪಡಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಅನಂತನಾಗ್ (ಬೆಂಗಳೂರು ನಗರಾಭಿವೃದ್ಧಿ ರಾಜ್ಯ ಸಚಿವರು) :

ಅ) ಬೆಂಗಳೂರು ನಗರದಲ್ಲಿ 30x40 ಅಡಿ ಅಳತೆಯ 1300 ನಿವೇಶನಗಳ ಹಂಚಿಕೆಗಾಗಿ ಏಪ್ರಿಲ್ 1998ರ ಅಧಿಸೂಚನೆ ಅನ್ವಯ 5,923 ಅರ್ಜಿದಾರರು ನಿವೇಶನ ಹಂಚಿಕೆಗಾಗಿ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆ) ಏಪ್ರಿಲ್ 1998 ಅಧಿಸೂಚನೆ ಅನ್ವಯ ಸ್ವೀಕರಿಸಲಾದ 5,923 ಅರ್ಜಿಗಳ ಪರಿಶೀಲನೆ ಮತ್ತು ಮಾಸ್ಟರ್ ಲಿಸ್ಟ್ ಸಿದ್ದಪಡಿಸುವ ಕಾರ್ಯಗಳು ಪೂರ್ಣಗೊಂಡಿದ್ದು, ನಿವೇಶನಗಳ ಹಂಚಿಕೆಯ ಬಗ್ಗೆ ಹಂಚಿಕೆ ಸಮಿತಿಯು ತೀರ್ಮಾನವನ್ನು ತೆಗೆದುಕೊಳ್ಳಬೇಕಾಗಿರುತ್ತದೆ.

ಇ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಈ ಕೆಳಕಂಡ 6 ಹೊಸ ಬಡಾವಣೆಗಳಲ್ಲಿ ನಿವೇಶನಗಳನ್ನು ರಚಿಸಲು ಕ್ರಮ ಕೈಗೊಂಡಿರುತ್ತದೆ.

1. ಬನಶಂಕರಿ 5ನೇ ಹಂತ 2. ಜ್ಞಾನಭಾರತಿ ಬಡಾವಣೆ 3. ಜೆ.ಪಿ. ನಗರ 8ನೇ ಫೇಸ್
4. ಜೆ.ಪಿ. ನಗರ 9ನೇ ಫೇಸ್ 5. ಬಿ.ಟಿ.ಎಂ. 4ನೇ ಹಂತ 6. ಬಿ.ಟಿ.ಎಂ. 6ನೇ ಹಂತ

ಈ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಿರುದ್ಧ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ 1985ರ ನಂತರ ಇದುವರೆವಿಗೆ ಒಟ್ಟು 171 ಪ್ರಕರಣಗಳು ನ್ಯಾಯಾಲಯದಲ್ಲಿ ಬಾಕಿ ಇರುತ್ತವೆ. ಅವುಗಳ ವಿವರಗಳು ಈ ಕೆಳಕಂಡಂತಿವೆ :

1985	1 ಪ್ರಕರಣ	1990	10 ಪ್ರಕರಣ	1994	37 ಪ್ರಕರಣ
1986	1 ಪ್ರಕರಣ	1991	9 ಪ್ರಕರಣ	1995	8 ಪ್ರಕರಣ
1987	8 ಪ್ರಕರಣ	1992	12 ಪ್ರಕರಣ	1996	22 ಪ್ರಕರಣ
1989	6 ಪ್ರಕರಣ	1993	6 ಪ್ರಕರಣ	1997	21 ಪ್ರಕರಣ
				1998	30 ಪ್ರಕರಣ

ಉ) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವಕೀಲರುಗಳಿಗೆ, ಮೇಲ್ಕಂಡ ನ್ಯಾಯಾಲಯದ ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಲು ಕ್ರಮ ಕೈಗೊಳ್ಳುವಂತೆ ಸೂಚಿಸಲಾಗಿದೆ.

ರಾಜ್ಯದಲ್ಲಿ ಸಿಎಲ್ - 2 ಮತ್ತು ಸಿಎಲ್ - 9 ಪರವಾನಗಿಗಳ ನೀಡಿಕೆ

503 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) ಮತ್ತು ಶ್ರೀ ಆರ್. ನಾರಾಯಣ (ಬಳ್ಳಾವಿ) : ಮಾನ್ಯ ಅಬಕಾರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಸಿ.ಎಲ್ 2 ಮತ್ತು ಸಿಎಲ್ 9 ಪರವಾನಗಿಗಳನ್ನು ನೀಡಲು ಅನುಸರಿಸುತ್ತಿರುವ

ನಿಯಮಾವಳಿಗಳೇನು? ಮತ್ತು ಈ ನಿಯಮಾವಳಿಗಳನ್ನು ಯಾವ ಆಧಾರದ ಮೇಲೆ ರಚಿಸಲಾಗಿದೆ?

ಆ) *ಈ ನಿಯಮಾವಳಿಗಳಂತೆ ಇದುವರೆಗೆ ರಾಜ್ಯದಲ್ಲಿ ನೀಡಿರುವ ಸಿ.ಎಲ್. 2 ಮತ್ತು ಸಿ.ಎಲ್. 9 ಪರವಾನಗಿಗಳ ಸಂಖ್ಯೆಗಳೆಷ್ಟು? ಈ ರೀತಿ ಪರವಾನಗಿ ಮಂಜೂರು ಮಾಡುವುದನ್ನು ನಿಲ್ಲಿಸಲಾಗಿದೆಯೇ?*

ಇ) *ಈ ನಿಯಮಾವಳಿಗಳಂತೆ ಅಥವಾ ಬದಲಾದ ಸಾಮಾಜಿಕ ಹಾಗೂ ಉತ್ತಮಗೊಂಡಿರುವ ಆರ್ಥಿಕ ಪರಿಸ್ಥಿತಿಯಲ್ಲಿ ಈ ಪರವಾನಗಿಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗುತ್ತಿದೆಯೇ? ಹಾಗಿದ್ದಲ್ಲಿ ಅದಕ್ಕೆ ಕಾರಣಗಳೇನು?*

ಶ್ರೀ ಜಯವಂತ ಸುಬ್ರಯ (ಅಬಕಾರಿ ರಾಜ್ಯ ಸಚಿವರು) :

ಅ) ಕರ್ನಾಟಕ ಅಬಕಾರಿ ಸನ್ನದುಗಳು (ಸಾಮಾನ್ಯ ಷರತ್ತುಗಳು) ನಿಯಮಗಳು 1967 ಮತ್ತು ಕರ್ನಾಟಕ ಅಬಕಾರಿ (ಭಾರತೀಯ ಮತ್ತು ವಿದೇಶಿ ಮದ್ಯ ಮಾರಾಟ) ನಿಯಮಗಳು 1968ನ್ನು ಅನುಸರಿಸಲಾಗುತ್ತಿದೆ. ಕರ್ನಾಟಕ ಅಬಕಾರಿ ಕಾಯ್ದೆ 1965ನ್ನು ಆಚರಣೆಗೆ ತರಲು ಸದರಿ ಕಾಯ್ದೆಯ ಸೆಕ್ಷನ್ 71ರಲ್ಲಿ ವಿಧಿಸಿರುವ ಅಧಿಕಾರದ ಮೇಲೆ ನಿಯಮಾವಳಿಗಳನ್ನು ರಚಿಸಲಾಗಿದೆ.

ಆ) ರಾಜ್ಯದಲ್ಲಿ ಒಟ್ಟ 3848 ಸಿಎಲ್ 2 ಮತ್ತು 3340 ಸಿಎಲ್ 9 ಸನ್ನದುಗಳನ್ನು ನೀಡಲಾಗಿದೆ. ಪ್ರವಾಸೋದ್ಯಮ ಅಭಿವೃದ್ಧಿ ಅಡಿಯಲ್ಲಿ ನೀಡಲಾಗುವ ಸಿ.ಎಲ್. 4, ಸಿ.ಎಲ್. 7 ಮತ್ತು ಸಿ.ಎಲ್. 9 ಸನ್ನದುಗಳನ್ನು ಹೊರತುಪಡಿಸಿ ಹೊಸ ಸನ್ನದುಗಳನ್ನು ಮಂಜೂರು ಮಾಡಲು ಸಧ್ಯಕ್ಕೆ ನಿರ್ಬಂಧವಿರುತ್ತದೆ.

ಇ) ಹೊಸ ಅಬಕಾರಿ ಸನ್ನದುಗಳನ್ನು ನೀಡುವ ಬಗ್ಗೆ ಸಚಿವ ಸಂಪುಟದ ಉಪ ಸಮಿತಿಯ ಪರಿಶೀಲನೆಯಲ್ಲಿದೆ.

ರಾಜ್ಯದಲ್ಲಿ ವಿದ್ಯುತ್ ನಿಲುಗಡೆ

2340 - ಶ್ರೀ ಅರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ರಾಜ್ಯದಲ್ಲಿ ಪ್ರತಿದಿನ ವಿದ್ಯುತ್ ನಿಲುಗಡೆ ಬಗ್ಗೆ ಯಾವ ನೀತಿಯನ್ನು ತೆಗೆದುಕೊಂಡಿದೆ, ವಿದ್ಯುತ್ ನಿಲುಗಡೆ ದಿನದ ಎಷ್ಟು ಗಂಟೆ, ಹಳ್ಳಿ ಮತ್ತು ಗ್ರಾಮೀಣ ಪ್ರದೇಶಕ್ಕೆ ವ್ಯತ್ಯಾಸವೇಕೆ, ವಿದ್ಯುತ್ ನಿಲುಗಡೆ ಈಗಾಗಲೇ ಮಾಡದಿರುವ ಜಿಲ್ಲೆ ಮತ್ತು ತಾಲ್ಲೂಕುಗಳು ಯಾವುವು, ಯಾವ ಕಾರಣಕ್ಕಾಗಿ ತಾರತಮ್ಯ ಮಾಡಲಾಗಿದೆ?*

ಶ್ರೀ ಶರಣ ಬಸಪ್ಪ ದರ್ಶನಾಪುರ್ (ಇಂಧನ ರಾಜ್ಯ ಸಚಿವರು) :

ಅ) ಕರ್ನಾಟಕ ರಾಜ್ಯದಲ್ಲಿ ಪ್ರತಿ ವರ್ಷವೂ ವಿದ್ಯುತ್ ಬಳಕೆಯು ಹೆಚ್ಚಳಗೊಳ್ಳುತ್ತಿದೆ, ಆದರೆ ಪ್ರಸ್ತುತ ಅಷ್ಟೇ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯು ಹೆಚ್ಚಳಗೊಳ್ಳುತ್ತಿಲ್ಲ. ಗ್ರಾಮಾಂತರ ಪ್ರದೇಶಗಳಲ್ಲಿ